## 5. ವಿಶ್ವಸಂಸ್ಥೆಯ ಅಂಗವಾಗಿರುವ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಆತಂಕ

ಕೊರೊನಾ–2 ವೈರಾಣು ಸೃಷ್ಟಿಸಿರುವ ಬಿಕ್ಕಟ್ಟಿನಿಂದಾಗಿ ಭಾರತದ ಅಸಂಘಟಿತ ವಲಯದಲ್ಲಿ ಉದ್ಯೋಗ ಭದ್ರತೆ ಇಲ್ಲದೇ ದುಡಿಯುವ ಅಂದಾಜು 40 ಕೋಟಿ ಜನರು ತೀವ್ರ ಸ್ವರೂಪದ ಬಡತನಕ್ಕೆ ಸಿಲುಕಿಕೊಳ್ಳಲಿದ್ದಾರೆ ಎಂದು ವಿಶ್ವಸಂಸ್ಥೆಯ ವರದಿಯಲ್ಲಿ ಆತಂಕ ವ್ಯಕ್ತಪಡಿಸಲಾಗಿದೆ.

ಜೀವನೋಪಾಯಕ್ಕೆ ಕೆಲಸದ ಅಭದ್ರತೆ ಇರುವ ಅನೌಪಚಾರಿಕ ಆರ್ಥಿಕತೆಯ ಚಟುವಟಿಕೆಗಳನ್ನೇ ಹೆಚ್ಚಾಗಿ ನೆಚ್ಚಿಕೊಂಡಿರುವ ಅಸಂಖ್ಯ ಜನರು ಲಾಕ್‌ಡೌನ್ ಮತ್ತಿತರ ನಿರ್ಬಂಧನಾತ್ಮಕ ಕ್ರಮಗಳಿಂದ ತೀವ್ರವಾಗಿ ಬಾಧಿತರಾಗಿದ್ದಾರೆ. ನಗರಗಳಲ್ಲಿ ದುಡಿಮೆಗೆ ಎರವಾಗಿರುವ ಲಕ್ಷಾಂತರ ಜನರು ಅನ್ಯ ಮಾರ್ಗ ಇಲ್ಲದೇ ತಮ್ಮ ಹಳ್ಳಿಗಳಿಗೆ ಮರಳಿದ್ದಾರೆ. ಇಂತಹ 40 ಕೋಟಿ ಜನರು ಬಡತನದ ಬೇಗೆಗೆ ಸಿಲುಕುವ ಅಪಾಯ ಎದುರಿಸುತ್ತಿದ್ದಾರೆ.

ವಿಶ್ವದಾದ್ಯಂತ ಪ್ರವರ್ಧಮಾನಕ್ಕೆ ಬರುತ್ತಿರುವ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ 200 ಕೋಟಿ ಜನರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಇವರೆಲ್ಲರ ಬದುಕು ಸಂಕಷ್ಟಕ್ಕೆ ಸಿಲುಕಿದೆ. ಭಾರತ, ನೈಜೀರಿಯಾ ಮತ್ತು ಬ್ರೆಜಿಲ್‌ನಲ್ಲಿ ತೊಂದರೆಗೆ ಸಿಲುಕಿರುವ ಅನೌಪಚಾರಿಕ ಆರ್ಥಿಕ ವಲಯಗಳಲ್ಲಿ ದುಡಿಯುವ ಇಂತಹ ಉದ್ಯೋಗಿಗಳ ಸಂಖ್ಯೆ ಗಣನೀಯವಾಗಿದೆ. ಕೊರೊನಾ ಪಿಡುಗು ಭಾರಿ ವಿನಾಶಕಾರಿ ಸ್ವರೂಪದ ಪರಿಣಾಮಗಳನ್ನು ಉಂಟು ಮಾಡಿರುವುದರಿಂದ ವಿಶ್ವದಾದ್ಯಂತ 19.50 ಕೋಟಿಗಳಷ್ಟು ಪೂರ್ಣಾವಧಿ ಉದ್ಯೋಗ ಅವಕಾಶಗಳೂ ಕೈತಪ್ಪಲಿವೆ.

ವಿಶ್ವದಾದ್ಯಂತ ದುಡಿಯುವ ಗಂಟೆಗಳು ಮತ್ತು ಆದಾಯದ ಮೇಲೆಯೂ ಕೊರೊನಾ ವಿನಾಶಕಾರಿ ಸ್ವರೂಪದ ಪರಿಣಾಮ ಬೀರುತ್ತಿದೆ. ಕೊರೊನಾ ಬಾಧಿತ ಜಾಗತಿಕ ಆರ್ಥಿಕತೆಯಲ್ಲಿ ಶೇ 6.7ರಷ್ಟು ದುಡಿಮೆಯ ಗಂಟೆಗಳು ದ್ವಿತೀಯ ತ್ರೈಮಾಸಿಕದ ವೇಳೆಗೆ ನಷ್ಟಗೊಳ್ಳಲಿವೆ. ಇದು 19 ಕೋಟಿ ಉದ್ಯೋಗ ಅವಕಾಶಗಳಿಗೆ ಸಮನಾಗಿರಲಿದೆ.

**ವಿಶ್ವದ ಅತಿದೊಡ್ಡ ಸವಾಲು:** ಅಂತರರಾಷ್ಟ್ರೀಯ ಸಮುದಾಯದ ಪಾಲಿಗೆ ಇದೊಂದು ಅತಿದೊಡ್ಡ ಸವಾಲಾಗಿ ಪರಿಣಮಿಸಿದೆ. ಕೊರೊನಾ ವೈರಾಣು ವಿರುದ್ಧದ ಸಮರದಲ್ಲಿ ದೇಶವೊಂದು ವಿಫಲವಾದರೆ ಎಲ್ಲ ದೇಶಗಳೂ ವಿಫಲವಾದಂತೆ, ಜಾಗತಿಕ ಸಮುದಾಯಕ್ಕೆ ಅದರಲ್ಲೂ ತೀವ್ರ ಸಂಕಷ್ಟಕ್ಕೆ ಸಿಲುಕಿರುವ ಮತ್ತು ಸ್ವಂತ ಬಲದ ಮೇಲೆ ಬಿಕ್ಕಟ್ಟಿನಿಂದ ಹೊರ ಬರಲು ಸಾಧ್ಯವಿಲ್ಲದವರಿಗೆ ನೆರವಾಗುವ ಮಾರ್ಗೋಪಾಯಗಳನ್ನು ತುರ್ತಾಗಿ ಕಂಡುಕೊಳ್ಳಬೇಕಾಗಿದೆ ಎಂದು 'ಐಎಲ್‌ಒ'ದ ಮಹಾನಿರ್ದೇಶಕ ಗಾಯ್ ರೈಡರ್ ಹೇಳಿದ್ದಾರೆ.

ವಿಶ್ವದಾದ್ಯಂತ ಅಸಂಘಟಿತ ಆರ್ಥಿಕ ವಲಯದಲ್ಲಿ ದುಡಿಯುತ್ತಿರುವ 200 ಕೋಟಿ ಜನರು ಕೆಲಸ ಕಳೆದುಕೊಳ್ಳುವ ಅಪಾಯ ಎದುರಿಸುತ್ತಿದ್ದಾರೆ. ಈಗಾಗಲೇ ಲಕ್ಷಾಂತರ ಜನರಿಗೆ ಇದರ ಬಿಸಿ ತಟ್ಟಿದೆ. ಮುಂಬರುವ ದಿನಗಳಲ್ಲಿನ ಬೆಳವಣಿಗೆಗಳು ಮತ್ತು ನೀತಿ ನಿರ್ಧಾರದ ಕ್ರಮಗಳು ಪ್ರಸಕ್ತ ಸಾಲಿನಲ್ಲಿ ಜಾಗತಿಕ ನಿರುದ್ಯೋಗದ ಚಿತ್ರಣ ನಿರ್ಧರಿಸಲಿವೆ. ಉದ್ಯೋಗಕ್ಕೆ ಎರವಾಗುವವರ ಕುರಿತ ಸದ್ಯದ ಅಂದಾಜು ವರ್ಷಾಂತ್ಯದ ವೇಳೆಗೆ ಬದಲಾಗುವ ಸಾಧ್ಯತೆ ಇದೆ.

ತಾತ್ಕಾಲಿಕ ಇಲ್ಲವೇ ಶಾಶ್ವತವಾಗಿ ಕೆಲಸದಿಂದ ವಜಾಗೊಳ್ಳುವ, ಕೆಲಸದ ಅವಧಿ ಕಡಿತಗೊಳ್ಳುವ ಮತ್ತು ವೇತನಕ್ಕೆ ಕತ್ತರಿ ಬೀಳಲಿದೆ ಎಂದು ಗುರುತಿಸಿರುವ ತೀವ್ರ ಬಾಧಿತ ವಲಯಗಳಲ್ಲಿ ವಿಶ್ವದಾದ್ಯಂತ 125 ಕೋಟಿ ಜನರು ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಬಹುತೇಕರು ಕಡಿಮೆ ಸಂಬಳಕ್ಕೆ ದುಡಿಯುತ್ತಿದ್ದಾರೆ. ಇವರೆಲ್ಲರ ಆದಾಯ ಹಠಾತ್ತಾಗಿ ಕಡಿತಗೊಂಡರೆ ಅದರ ಪರಿಣಾಮಗಳು ಅನಾಹುತಕಾರಿ ಸ್ವರೂಪದಲ್ಲಿ ಇರಲಿವೆ ಎಂದು ವರದಿಯಲ್ಲಿ ಕಳವಳ ವ್ಯಕ್ತಪಡಿಸಲಾಗಿದೆ.

ಆಧಾರ:ಪ್ರಜಾವಾಣಿ, ದಿನಾಂಕ: 09.04.2020